ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ನಾಗಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ ವಿಕಾಸ ವರ್ಗ ದ್ವಿತೀಯ 2025 ಸಮಾರೋಪ ಸಮಾರಂಭದಲ್ಲಿ ಸರಸಂಘಚಾಲಕ ಡಾ|| ಮೋಹನ್ ಭಾಗವತ್, ಮಾಜಿ ಕೇಂದ್ರ ಸಚಿವ ಅರವಿಂದ ನೇತಾಂ ಭಾಗವಹಿಸಿದರು.

ಸಂಪುಟ : 47 ಸಂಚಿಕೆ : 04 ಜ್ಯೇಷ್ಠ–ಆಷಾಢ ಕಲಿಯುಗಾಬ್ದ 5127 15–06–2025 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ‘ತುರ್ತುಪರಿಸ್ಥಿತಿ’ ವಿರುದ್ಧದ ಅಭೂತಪೂರ್ವ ಹೋರಾಟಕ್ಕೆ 50 ವರ್ಷ

ಭಾರತದ ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಈ ನಾಡಿನ ಸಾರ್ವಭೌಮತೆಗೆ, ಪ್ರಜಾಪ್ರಭುತ್ವಕ್ಕೆ, ಸಂವಿಧಾನದ ಆಶಯಗಳಿಗೆ ಒದಗಿದ ಬಹುದೊಡ್ಡ ಸಂಕಷ್ಟ 1975ರಲ್ಲಿ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಕಾರ್ಯಾಚರಿಸುವ ಪ್ರಜಾಪ್ರಭುತ್ವವನ್ನು ಮೂಲೆಗುಂಪಾಗಿಸಲಾಯಿತು. ಯಾವ ಸರ್ಕಾರವನ್ನು ಇಡೀ ರಾಷ್ಟ್ರದ ಜನಾದೇಶದ ಪ್ರತಿಫಲವೆನ್ನುತ್ತೇವೆಯೋ, ಜಾಗತಿಕವಾಗಿ ಭಾರತದ ಧ್ವನಿ ಎಂದು ಸಂಬೋಧಿಸುತ್ತೇವೆಯೋ ಅದೇ ಸರ್ಕಾರ ಅಧಿಕಾರದ ದಾಹದಿಂದಾಗಿ ಸರ್ವಾಧಿಕಾರಿ ಧೋರಣೆಯನ್ನು ತೋರಿದ್ದಲ್ಲದೇ ವಿಶ್ವದ ಮುಂದೆ ರಾಷ್ಟ್ರವನ್ನು ತಲೆತಗ್ಗಿಸುವಂತೆ ಮಾಡಿತ್ತು. ಈ ವರ್ಷ ಈ ಕರಾಳ ಹೇರಿಕೆಗೆ, ಸರ್ವಾಧಿಕಾರಿ ಧೋರಣೆಗೆ 50 ವರ್ಷ!

**ಹಿನ್ನೆಲೆ:** 1966ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರೀ ಅವರು ತಾಷ್ಕೆಂಟ್ ಒಪ್ಪಂದಕ್ಕೆಂದು ತೆರಳಿ ನಿಗೂಢವಾಗಿ ನಿಧನರಾದ ನಂತರ ಇಂದಿರಾಗಾಂಧಿ ಪ್ರಧಾನಿಯಾದರು. ಅವರು ಪ್ರಧಾನಿಯಾಗಿ ಕೆಲವೇ ವರ್ಷಗಳಲ್ಲಿ ಇಂದಿರಾಗಾಂಧಿ ಅವರ ನೇತೃತ್ವಕ್ಕೆ ಕಾಂಗ್ರೆಸ್‌ನ ಹಿರಿಯ ನೇತಾರರಲ್ಲಿ ಭಿನ್ನಮತವುಂಟಾಗಿ ಕಾಂಗ್ರೆಸ್ ಇಬ್ಭಾಗವಾಯಿತು. ಕೆಲವರು ಸಮತಾ ಕಾಂಗ್ರೆಸ್ ಕಟ್ಟಿಕೊಂಡರು. ಕಮ್ಯುನಿಷ್ಟ್ ಹಿನ್ನೆಲೆಯ ಬೆಂಬಲದೊಂದಿಗೆ ಇಂದಿರಾಗಾಂಧಿ ಅಧಿಕಾರವನ್ನು ಮುನ್ನಡೆಸಿದರು. ಇಂದಿರಾಗಾಂಧಿ ನೇತೃತ್ವದ ಸರ್ಕಾರಕ್ಕೆ ಜಾಗತಿಕ ಮನ್ನಣೆ ದೊರೆತಿದ್ದು 1971ರಲ್ಲಿ ಬಾಂಗ್ಲಾ ವಿಮೋಚನೆಗೆ ಭಾರತ ಸಹಕಾರಕೊಟ್ಟು ಪಾಕ್ ವಿರುದ್ಧ ನಡೆದ ಯುದ್ಧದಲ್ಲಿ ಜಯಗಳಿಸಿದ ನಂತರ.

ಬಾಂಗ್ಲಾದ ಶೇಖ್ ಮುಜೀಬುರ್ ರಹಮಾನ್ ತನ್ನ ಅವಾಮಿ ಲೀಗ್ ಮೂಲಕ ಪಾಕ್ ವಿರುದ್ಧ ಹೋರಾಟ ಆರಂಭಿಸಿರುತ್ತಾರೆ. ಅವರಿಗೆ ಬೆಂಬಲವಾಗಿ ಭಾರತ 1971ರಲ್ಲಿ ಪಾಕ್ ವಿರುದ್ಧ ಹೋರಾಟ ಮಾಡಿ ಅತಿದೊಡ್ಡ ವಿಜಯವನ್ನು ಗಳಿಸುತ್ತೇವೆ. 1971ರಲ್ಲಿ ಡಿಸೆಂಬರ್ 16ರಂದು ನಮ್ಮ 16,000 ಸೈನಿಕರು 92000 ಮಂದಿ ಪಾಕ್ ಸೈನಿಕರನ್ನು ವಶಕ್ಕೆ ತೆಗೆದುಕೊಂಡು ಗೆದ್ದರು. ಪಾಕಿಸ್ತಾನದಿಂದ ಬಾಂಗ್ಲಾದೇಶವನ್ನು ಬೇರ್ಪಡಿಸಿ ನೂತನ ದೇಶವನ್ನು ರಚಿಸಲಾಯಿತು. ಇದರ ಬೆನ್ನಲ್ಲೇ 1972ರ ಚುನಾವಣೆಯಲ್ಲಿ 518 ಲೋಕಸಭಾ ಕ್ಷೇತ್ರಗಳಲ್ಲಿ 352 ಕ್ಷೇತ್ರಗಳನ್ನು ಕಾಂಗ್ರೆಸ್ ಸದಸ್ಯರು ಗೆದ್ದರು. ಆಗ 'India is Indira, Indira is India' ಎನ್ನುವ ಘೋಷಣೆಯೂ ಪ್ರಸಿದ್ಧಿ ಪಡೆಯಿತು. ದೇಶ – ವಿದೇಶಗಳಿಂದ ಹೊಗಳಿಕೆಗಳು ಬಂದಾಗ ಸಹಜವಾಗಿ ಇಂದಿರಾಗಾಂಧಿಯವರಿಗೆ ಅಧಿಕಾರದ ಮದ ತಲೆಗೇರಿತು. ಜತೆಗೇ ಕಾಂಗ್ರೆಸ್‌ನ ಅನೇಕರು ಭ್ರಷ್ಟಾಚಾರಕ್ಕೆ ಇಳಿದರು.

1973ರಲ್ಲಿ ಗುಜರಾತ್‌ನಲ್ಲಿ ಸಮಾಜವಾದಿ ನಾಯಕ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿತೈಷಿಯಾಗಿದ್ದ ಜಯಪ್ರಕಾಶ್ ನಾರಾಯಣ್ ಅವರು ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದರು. ಇದರ ಪರಿಣಾಮ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಚಿಮನ್‌ಭಾಯಿ ಪಟೇಲ್ 1973ರ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಬೇಕಾಯಿತು, ಅಲ್ಲಿ ರಾಷ್ಟ್ರಪತಿ ಆಡಳಿತ ಬಂತು. ಬಿಹಾರದಲ್ಲಿಯೂ ಪ್ರತಿಭಟನೆ ಕಾವೇರಿತು. ಈ ಸಂದರ್ಭದಲ್ಲಿ ಅನೇಕರು ಇಂದಿರಾಗಾಂಧಿಗೆ "ವಿರೋಧ ಪಕ್ಷಗಳನ್ನು ಈಗಲೇ ಮಟ್ಟಹಾಕಬೇಕು" ಎಂದು ಸಲಹೆ ನೀಡಿದರು. ಆದರೆ ಕೆಲವೇ ದಿನಗಳಲ್ಲಿ ನಂತರ ಸ್ವತಃ ಇಂದಿರಾಗಾಂಧಿ ಮೇಲೆ 1971ರ ಚುನಾವಣೆಯಲ್ಲಿ ಭ್ರಷ್ಟಾಚಾರ ಮಾಡಿದ ಆರೋಪದಿಂದ ಅಲಹಾಬಾದ್ ಹೈಕೋರ್ಟ್‌ನಲ್ಲಿ ಕೇಸು ದಾಖಲಾಯಿತು.

**ತುರ್ತುಪರಿಸ್ಥಿತಿ ಹೇರಿಕೆ:** 1975 ಜೂನ್ 12ಕ್ಕೆ ಅಲಹಾಬಾದಿನ ಹೈಕೋರ್ಟ್ ಇಂದಿರಾಗಾಂಧಿ ಭ್ರಷ್ಟಾಚಾರ ಮಾಡಿದ್ದು ಹೌದು ಎಂದು ತೀರ್ಪಿತ್ತಿತ್ತು. ಅದೇ ದಿನ ಗುಜರಾತ್ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿತು. ಆಗ ಇಂದಿರಾಗಾಂಧಿಯವರು ನ್ಯಾಯಾಂಗ ಬಂಧನದಿಂದ ತಪ್ಪಿಸಿಕೊಳ್ಳಲು ಮಾಡಿದ ಯೋಜನೆ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಬೇಕು ಎನ್ನುವುದಾಗಿತ್ತು. 1975 ಜೂನ್ 25 ರಾತ್ರಿ ಇಂದಿರಾಗಾಂಧಿ ಅವರು ನೇರವಾಗಿ ರಾಷ್ಟ್ರಪತಿಗಳಾಗಿದ್ದ ಡಾ|| ಫಕ್ರುದ್ದೀನ್ ಅಲಿ ಅಹಮ್ಮದ್ ಅವರಿಂದ ತುರ್ತು ಪರಿಸ್ಥಿತಿ ಹೇರಲು ಒಪ್ಪಿಗೆ ಪಡೆದು ಜೂನ್ 26 ಬೆಳಗ್ಗೆ ಇಡೀ ದೇಶ ಎರಡನೇ ಬಾರಿಗೆ ಗುಲಾಮಗಿರಿಗೆ ಮರಳುವಂತೆ ಮಾಡಿದರು. ಪತ್ರಿಕೆಗಳ ಮೇಲೆ ನಿರ್ಬಂಧ ಹೇರಲಾಯಿತು, ಮುದ್ರಣಕ್ಕಿಂತ ಮುಂಚೆ ಸರಕಾರಿ ಅಧಿಕಾರಿಗಳ ಅನುಮತಿ ಪಡೆಯಬೇಕಿತ್ತು, ವಿರೋಧ ಪಕ್ಷದ ನಾಯಕರುಗಳಿಂದ ಹಿಡಿದು, ಅಸಂವಿಧಾನಿಕ ನಡೆಯನ್ನು ಪ್ರಶ್ನಿಸಿದ ಸಾಮಾನ್ಯರವರೆಗೆ ಎಲ್ಲರನ್ನೂ ಬಂಧಿಸಲಾಯಿತು. ಇಂದಿರಾಗಾಂಧಿಗೆ ಅನೇಕರು "ಇದು ಸರಿಯಲ್ಲ" ಎಂದು ಸಲಹೆಕೊಟ್ಟರೂ ಅವರು ಕೇಳಲಿಲ್ಲ. ನನ್ನಲ್ಲಿ ಸೈನ್ಯ, ಪೊಲೀಸ್ ಇದೆ ಎಂಬ ಅಹಂಕಾರ ಮೂಡಿತ್ತು. ಯಾರೂ ಮಾತನಾಡುವಂತಿರಲಿಲ್ಲ.



**ಆರೆಸ್ಸೆಸ್ ಮೇಲೆ ನಿರ್ಬಂಧ:** ಜುಲೈ 4 ರಂದು ಆರೆಸ್ಸೆಸ್‌ಗೆ ನಿರ್ಬಂಧ. ಸರಸಂಘಚಾಲಕರಾಗಿದ್ದ ಬಾಳಾಸಾಹೇಬ್ ದೇವರಸ್ ಅವರನ್ನು ಪುಣೆಯ ಯರವಾಡ ಜೈಲಿಗೆ ಹಾಕಿದರು. ಆದರೆ ತರುಣ ಸ್ವಯಂಸೇವಕರು, ಕಾರ್ಯಕರ್ತರು ಅವರೆಲ್ಲರಿಗೂ ಅನಿಸಿದ್ದು ಇದು ದುರದೃಷ್ಟಕರ ಬೆಳವಣಿಗೆ. ಇದರ ವಿರುದ್ಧ ಸಮಾಜದಲ್ಲಿ ನೇತೃತ್ವ ವಹಿಸಿ ಯಾವ ಕಾರಣಕ್ಕೂ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂದು ನಿರ್ಧರಿಸಿದರು. 1974ರಿಂದಲೇ ಲೋಕ ಸಂಘರ್ಷ ಸಮಿತಿ, 'Citizens for Democracy' ದೇಶದಲ್ಲಿ ರಚನೆಯಾಯಿತು. ಅದರ ಪ್ರಮುಖರಾಗಿದ್ದ ಜಯಪ್ರಕಾಶ್ ನಾರಾಯಣರನ್ನೂ ಜೈಲಿಗೆ ಹಾಕಲಾಯಿತು. ಆಗ ಅವರು ಸಂಘದ ಹಿರಿಯ ಕಾರ್ಯಕರ್ತರು, ಸಂಸದ ನಾನಾಜಿ ದೇಶ್‌ಮುಖ್ ಅವರಿಗೆ 'ಲೋಕ ಸಂಘರ್ಷ ಸಮತಿಯ ಕಾರ್ಯದರ್ಶಿಯಾಗಿ ಜವಾಬ್ದಾರಿ ತೆಗೆದುಕೊಂಡು, ಚಳುವಳಿ ರೂಪಿಸಿ' ಎಂದು ಪತ್ರ ಬರೆದರು.

ನಂತರ ಇಡೀ ದೇಶದಲ್ಲಿ ಅಭೂತಪೂರ್ವ ಹೋರಾಟ. ಒಟ್ಟು 6 ರೀತಿಯ ಹಂತಗಳಲ್ಲೂ ಸಂಘರ್ಷ.

1. ಅಖಿಲ ಭಾರತೀಯ ಮಟ್ಟದಲ್ಲಿ ಯೋಜನೆ.
2. ಹೋರಾಟಕ್ಕೆ ಬೇಕಾದ ಭೂಗತ ಸಾಹಿತ್ಯ ರಚನೆ
3. ರಾಜಕೀಯ ಪ್ರಮುಖರ ಜಾಗೃತಿಗೆ ವ್ಯವಸ್ಥೆ
4. ಸಮಾಜದ ಜಾಗೃತಿಗೆ ವ್ಯವಸ್ಥೆ
5. ಹೋರಾಟಗಾರರಿಗೆ ಜೈಲಾದರೆ ಅವರ ಮನೆಯ ಪರಿಸ್ಥಿತಿ ಕುರಿತು ಕಾಳಜಿ.
6. ನಿಧಿ ಸಂಗ್ರಹ

ಲೋಕ ಸಂಘರ್ಷ ಸಮಿತಿಯ ಹೆಸರಲ್ಲಿ ಇಡೀ ದೇಶದ ಎಲ್ಲಾ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ರೂಪಿಸಿದ್ದು ಸಂಘದ ಕಾರ್ಯಕರ್ತರು. ಆರೆಸ್ಸೆಸ್ ಅನ್ನು ವಿರೋಧಿಸುತ್ತಿದ್ದವರೂ ಬೆಂಬಲ ನೀಡಿದರು. ಗೋಕಾಕ್‌ನ ಸ್ವಾತಂತ್ರ್ಯ ಹೋರಾಟಗಾರ ಅಣ್ಣು ಗುರೂಜಿ ತಮ್ಮ ಆತ್ಮ ಚರಿತ್ರೆಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ "ತುರ್ತುಪರಿಸ್ಥಿತಿ ವೇಳೆ ಹೋರಾಟ ಮಾಡಬೇಕೆಂದು ಅವರ ಊರಿನಲ್ಲಿದ್ದ, ಸರ್ಕಾರದ ಪಿಂಚಣಿ ಪಡೆಯುತ್ತಿದ್ದ 300 ಮಂದಿ ಹೋರಾಟಗಾರರನ್ನು ಕೇಳಿಕೊಂಡೆ. ಆದರೆ ಪಿಂಚಣಿ ರದ್ದಾಗುವ ಭಯದಿಂದ ಒಬ್ಬರೂ ಬರಲಿಲ್ಲ. ನನ್ನ ಜತೆ ಹೆಗಲು ಕೊಟ್ಟು ದುಡಿದವರು ಆರೆಸ್ಸೆಸ್ ಸ್ವಯಂಸೇವಕರು" ಎಂದರು.

ಅನೇಕರು ನೌಕರಿ ಕಳೆದುಕೊಂಡರು, ಪೊಲೀಸರ ದೌರ್ಜನ್ಯಕ್ಕೆ ಕೈ–ಕಾಲು ಕಳೆದುಕೊಂಡರು. ಈ ದೇಶವನ್ನು ನಿಜವಾಗಿ ಪ್ರೀತಿಸುವವರು ಆರೆಸ್ಸೆಸ್‌ನವರು ಎಂಬ ಭಾವ ಬಲಗೊಂಡಿತು. ಪಂಜಾಬ್‌ನಲ್ಲಿ ಅಕಾಲಿದಳ ತುರ್ತು ಪರಿಸ್ಥಿತಿಯ ವಿರುದ್ಧ ದೇಶಾದ್ಯಂತ ಏಕಕಾಲಕ್ಕೆ ಸತ್ಯಾಗ್ರಹವನ್ನು ನವೆಂಬರ್ 14 ರಂದು ಏರ್ಪಡಿಸಿದರು. ಹೊರಬಂದರೆ ಅರೆಸ್ಟ್ ಮಾಡುವ ಭೀತಿಯಿದ್ದ ಸಮಯದಲ್ಲಿ, ಇಡೀ ದೇಶದಲ್ಲಿ ತಾಲೂಕಿನವರೆಗೆ ಪೊಲೀಸ್‌ಗೆ ಗೊತ್ತಾಗದೇ ಸತ್ಯಾಗ್ರಹದ ಮಾಹಿತಿ ಹೋಯಿತು. ನವೆಂಬರ್ 14ರಂದು ಏಕಕಾಲಕ್ಕೆ ಎಲ್ಲಾ ಕಡೆಗಳಲ್ಲಿ ಬಹುತೇಕ ಎಲ್ಲಾ ನಾಯಕರು ಸೇರಿ ಚಳುವಳಿ ಆರಂಭಿಸಿದರು. ಅಕಾಲಿದಳ ತುರ್ತು ಪರಿಸ್ಥಿತಿ ನಿಲ್ಲುವವರೆಗೂ ಪ್ರತಿನಿತ್ಯ ಹೋರಾಟದ ನಿಶ್ಚಯ ಮಾಡಿತು.

ಇಡೀ ದೇಶದಲ್ಲಿ ಒಂದೇ ಒಂದು ಕಡೆ ಪೊಲೀಸರಿಗೆ ವಿರೋಧ ನೀಡದೆ ಶಾಂತಯುತವಾಗಿ ಸತ್ಯಾಗ್ರಹ ಮಾಡಿದರು. ಮಾಧವ ರಾವ್ ಮುಳೆ, ಮೋರೋಪಂತ ಪಿಂಗಳೆ, ಭಾವುರಾವ್ ದೇವರಸ್ ಇಡೀ ದೇಶದ ಎಲ್ಲಾ ಪ್ರಮುಖರ ಜತೆ ಸಂಪರ್ಕ ಸಾಧಿಸಿದರು. ಅತ್ಯಂತ ನೋವಿನ ಪರಿಸ್ಥಿತಿಯಲ್ಲೂ ಮನಸ್ಸಿನ ಸಂಕಲ್ಪ ಉಳಿಸಿಕೊಂಡರು. ಸ್ವಯಂಸೇವಕರ ಮನೆಯ ತಾಯಂದಿರೂ ಪೊಲೀಸರಿಂದ ಬೈಸಿಕೊಂಡರೂ, ಬಡಿಸಿಕೊಂಡರೂ ಪೊಲೀಸ್ ಎದುರು ಯಾವುದೇ ರೀತಿ ಮಾಹಿತಿ ಬಿಟ್ಟುಕೊಡಲಿಲ್ಲ.

**ತುರ್ತುಪರಿಸ್ಥಿತಿ ಹೇರಿಕೆಗೆ ವಿದೇಶಗಳಲ್ಲೂ ವಿರೋಧ:** ಅಮೆರಿಕಾ, ಬ್ರಿಟನ್, ಜರ್ಮನಿ ಮುಂತಾದ ರಾಷ್ಟ್ರಗಳಲ್ಲೂ ಭಾರತೀಯರ ಪ್ರಜಾಸತ್ತಾತ್ಮಕತೆಯನ್ನು ಉಳಿಸುವುದಕ್ಕಾಗಿ ಅನೇಕ ಸಂಸ್ಥೆಗಳು, ಪತ್ರಿಕೆಗಳು ಪ್ರಯತ್ನಿಸಿದವು. ಅಮೇರಿಕಾದಲ್ಲಿ ಸ್ಥಾಪನೆಯಾದ 'ಇಂಡಿಯನ್ಸ್ ಫಾರ್ ಡೆಮಾಕ್ರಸಿ' ಮತ್ತು ಇಂಗ್ಲೆಂಡಿನ 'ಫ್ರೆಂಡ್ಸ್ ಆಫ್ ಇಂಡಿಯಾ ಸೊಸೈಟಿ' ಪರಸ್ಪರ ಸಂಪರ್ಕವನ್ನಿಟ್ಟುಕೊಂಡು ವಿಶ್ವದ ಇತರೆ ರಾಷ್ಟ್ರಗಳಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸಿದರು. 82 ರಾಷ್ಟ್ರಗಳಲ್ಲಿನ ಭಾರತೀಯರ ಜೊತೆ ಇವು ಸಂಪರ್ಕ ಸಾಧಿಸಿತ್ತು.

**ತುರ್ತುಪರಿಸ್ಥಿತಿ ಮತ್ತು ಕರ್ನಾಟಕ:** ಕರ್ನಾಟಕದಲ್ಲಿ 18 ತಿಂಗಳ ಒಳಗಡೆ ಕಹಳೆ ಸೇರಿ 577 ಪ್ರಕಟಣೆಗಳನ್ನು ಕಾರ್ಯಕರ್ತರು ತಂದರು. 57 ಕಡೆಗಳಲ್ಲಿ, 18 ತಿಂಗಳಲ್ಲಿ ಮುದ್ರಣವಾಗಿದ್ದು 32 ಲಕ್ಷ ಪ್ರತಿಗಳು. ರಾಜ್ಯದಲ್ಲಿ 17000 ಜೈಲು ಸೇರಿದರೆ, ದಕ್ಷಿಣ ಕನ್ನಡ ಜಿಲ್ಲೆಯವರೇ 11,000 ಮಂದಿ ಇದ್ದರು. ಎಲ್ಲರೂ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. 1976ರ ಅಂತ್ಯದಲ್ಲಿ ಇಂದಿರಾಗಾಂಧಿ ಅವರಿಗೆ ಚುನಾವಣೆಯಲ್ಲಿ ಗೆದ್ದರೆ ಮತ್ತೆ ತನ್ನನ್ನು ತಡೆಯುವವರಾರೂ ಇಲ್ಲ ಎಂದನಿಸಿತು. 1977 ಫೆ.18ಕ್ಕೆ ಲೋಕಸಭಾ ಚುನಾವಣೆ ಘೋಷಣೆಯಾಯಿತು. ಆಗ ಸಂಘದ ಕಾರ್ಯಕರ್ತ ಶಕ್ತಿ ಇಡೀ ದೇಶದಲ್ಲಿ ಮನೆಮನೆಗೆ ಹೋಗಿ ಜಾಗೃತಿ ಮೂಡಿಸಿದರು. ಜನಸಂಘ ಮತ್ತು ಇನ್ನಿತರ ರಾಜಕೀಯ ಪಕ್ಷಗಳು 'ಜನತಾ ಪಕ್ಷ'ದ ಹೆಸರಿನಲ್ಲಿ ಒಂದಾಗಿ ಕಾಂಗ್ರೆಸ್ ಅನ್ನು ಎದುರಿಸಿತು. ಎಲ್ಲದರ ಪರಿಣಾಮವಾಗಿ ಮಾರ್ಚ್ 27, 1977 ಫಲಿತಾಂಶ ಪ್ರಕಟವಾಗಿ ಇಂದಿರಾಗಾಂಧಿ ಅವರಿಗೆ ಹೀನಾಯ ಸೋಲಾಯಿತು. ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಕ್ಷ ಲೋಕಸಭಾ ಚುನಾವಣೆಯಲ್ಲಿ ಗೆದ್ದಿತು. ಒಂದು ಕಾಲು ಲಕ್ಷ ಜನ ಸ್ವಯಂಸೇವಕರನ್ನು ಬಂಧಿಸಲಾಗಿತ್ತು.

ಆಂತರಿಕ ತುರ್ತುಪರಿಸ್ಥಿತಿಯ ನಿರ್ಧಾರದ ವಿರುದ್ಧ ಮಾತನಾಡಿದ ಕಾರಣಕ್ಕಾಗಿ ಕರ್ನಾಟಕದಲ್ಲಿ ಪೊಲೀಸರ ಲಾಠಿಪ್ರಹಾರದಿಂದ ಗಾಯಗೊಂಡ ಸತ್ಯಾಗ್ರಹಿಗಳು, ಪೊಲೀಸ್ ಠಾಣೆಗಳಲ್ಲಿ ದೌರ್ಜನ್ಯಕ್ಕೆ ತುತ್ತಾದವರ ಒಟ್ಟು ಸಂಖ್ಯೆ 1917. ದೇಹದ ಯಾವುದಾದರೂ ಒಂದು ಅಂಗ ಶಾಶ್ವತವಾಗಿ ಊನವಾದವರ ಸಂಖ್ಯೆ ನೂರಕ್ಕೂ ಹೆಚ್ಚಿದೆ. ಅಧಿಕಾರದ ದಾಹಕ್ಕೆ ಬಲಿಯಾದವರ ಸಂಖ್ಯೆಯೂ ಹಲವಿದೆ. ತಮ್ಮ ಸತ್ಯಾಗ್ರಹದಿಂದಾಗಿ, ನ್ಯಾಯಕ್ಕಾಗಿ ಮಾಡಿದ ಹೋರಾಟದಿಂದಾಗಿ ಅವರ ಮನೆಯವರೂ ಕಷ್ಟಪಡುವಂತಾಗಿರುವುದನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡವರೂ, ಹೃದಯಾಘಾತಕ್ಕೆ ಒಳಗಾದವರೂ ಅನೇಕರು. ಇವರೆಲ್ಲರ ತ್ಯಾಗ ಮತ್ತು ಬಲಿದಾನದಿಂದ 1977ರ ಮಾರ್ಚ್ 21ರ ಬೆಳಗ್ಗೆ ತುರ್ತುಪರಿಸ್ಥಿತಿ ಮುಕ್ತಾಯಗೊಂಡಿತು.

## ಸಂಸ್ಮರಣೆ

# ಚಿತ್ತರಂಜನ್ ದಾಸ್



ದೇಶಬಂಧು ಎಂದೇ ಜನಮಾನಸದಲ್ಲಿ ಗುರುತಿಸಿಕೊಂಡಿದ್ದ ಚಿತ್ತರಂಜನ್ ದಾಸ್ ಅವರು ರಾಜಕೀಯ ಹಾಗೂ ಸ್ವಾತಂತ್ರ್ಯ ಹೋರಾಟಗಾರ. ಭಾರತೀಯ ಸ್ವಾತಂತ್ರ್ಯ ಚಳವಳಿ ಸಮಯದಲ್ಲಿ ಅವರು ವಕೀಲರಾಗಿ ಕಾರ್ಯನಿರ್ವಹಿಸಿದ್ದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಅಪ್ಪಟ್ಟ ಗುರುಗಳಾಗಿದ್ದವರು ಚಿತ್ತರಂಜನ್ ದಾಸ್.

ಚಿತ್ತರಂಜನ್ ದಾಸ್ ಅವರು ನವೆಂಬರ್ ನವೆಂಬರ್ 5, 1870 ರಂದು ಇಂದಿನ ಬಾಂಗ್ಲಾದೇಶದ ಬಿಕ್ರಮ್‌ಪುರ ಜಿಲ್ಲೆಯ ತೇಲಿರ್‌ಬಾಗ್ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಭುವನ್ ಮೋಹನ್ ದಾಸ್ ಅವರು ವಕೀಲರು ಮತ್ತು ಪತ್ರಕರ್ತರಾಗಿದ್ದರು. ಅವರ ತಾಯಿ ನಿಸ್ತರಿಣಿ ದೇಬಿ. ಚಿತ್ತರಂಜನ್ ದಾಸ್ ಅವರ ಚಿಕ್ಕಪ್ಪ ದುರ್ಗಾ ಮೋಹನ್ ದಾಸ್ ಬ್ರಹ್ಮ ಸಮಾಜದಲ್ಲಿ ತೊಡಗಿಸಿಕೊಂಡಿದ್ದರು.

ಚಿತ್ತರಂಜನ್ ದಾಸ್ ಅವರು ಪ್ರಾಥಮಿಕ ಶಿಕ್ಷಣವನ್ನು ತೇಲಿರ್ ಬಾಗ್‌ನಲ್ಲಿ ಮುಗಿಸಿದರು. ನಂತರ ಕೊಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವಿಯನ್ನು ಪೂರ್ಣಗೊಳಿಸಿದರು. ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್‌ಗೆ ಹೋದರು. ಅವರು ಇಂಗ್ಲೆಂಡ್‌ನಲ್ಲಿ ಕಾನೂನು ಅಧ್ಯಯನವನ್ನು ಮುಗಿಸಿದರು. ಚಿತ್ತರಂಜನ್ ದಾಸ್ ಅವರು ಕೊಲ್ಕತ್ತಾ ಹೈಕೋರ್ಟ್‌ನಲ್ಲಿ ಅನೇಕ ವರ್ಷಗಳ ಕಾಲ ಕಾನೂನು ಅಭ್ಯಾಸ ಮಾಡಿದರು. ಅವರು ಅರಬಿಂದೋ ಮತ್ತು ಬಿಪಿನ್ ಚಂದ್ರ ಪಾಲ್ ಅವರೊಂದಿಗೆ ಇಂಗ್ಲಿಷ್ ವಾರಪತ್ರಿಕೆ 'ವಂದೇ ಮಾತರಂ'ಗೆ ಕೊಡುಗೆ ನೀಡಿದರು. ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಬಂಗಾಳಿ ಭಾಷೆಯ ಬಳಕೆಯನ್ನು ಸಕ್ರಿಯವಾಗಿ ಪ್ರತಿಪಾದಿಸಿದರು. ಖಾದಿ ಮತ್ತು ಗುಡಿ ಕೈಗಾರಿಕೆಗಳ ಉದ್ದೇಶಕ್ಕಾಗಿ ಹೋರಾಡಿದರು. ಅವರು ಮಹಾತ್ಮ ಗಾಂಧಿ ನೇತೃತ್ವದ ಅಸಹಕಾರ ಚಳವಳಿಯಲ್ಲಿ ತೊಡಗಿಸಿಕೊಂಡರು. ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಚಿತ್ತರಂಜನ್ ದಾಸ್ ಅವರನ್ನು ಬ್ರಿಟಿಷರು ಜೈಲಿಗೆ ಹಾಕಿದ್ದರು.

1909ರಲ್ಲಿ ಅಲಿಪುರ ಬಾಂಬ್ ಪ್ರಕರಣದಲ್ಲಿ ಅರಬಿಂದೋ ಘೋಷ್ ಅವರನ್ನು ಬಂಧಿಸಿದಾಗ ದಾಸ್ ನ್ಯಾಯಾಲಯದಲ್ಲಿ ಘೋಷ್ ಅವರನ್ನು ಯಶಸ್ವಿಯಾಗಿ ಸಮರ್ಥಿಸಿಕೊಂಡರು. ಅಲಿಪೋರ್ ಬಾಂಬ್ ಪ್ರಕರಣವನ್ನು ಮುರಾರಿಪುಕರ್ ಪಿತೂರಿ ಎಂದೂ ಕರೆಯುತ್ತಾರೆ. ಚಿತ್ತರಂಜನ್ ದಾಸ್ ಅವರು ಬ್ರಿಟಿಷ್ ನೀತಿಗಳ ವಿರುದ್ಧ ಹೋರಾಡಲು ಫಾರ್ವರ್ಡ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ನಂತರ ಅವರು ಪತ್ರಿಕೆಯ ಹೆಸರನ್ನು ಲಿಬರ್ಟಿ ಎಂದು ಬದಲಾಯಿಸಿದರು.

ಚಿತ್ತರಂಜನ್ ಅವರು ಕಾಲೇಜಿನಲ್ಲಿ ಓದುತ್ತಿದ್ದಾಗಲೇ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. ಅವರು ತಮ್ಮ ಕಾಲೇಜು ದಿನಗಳಲ್ಲಿ ವಿದ್ಯಾರ್ಥಿ ಸಂಘ ಸ್ಥಾಪಿಸಿದರು. ನಂತರ ಅವರು ಭಾರತೀಯ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಅವರು ಕಲ್ಕತ್ತಾ ಮುನ್ಸಿಪಲ್ ಕಾರ್ಪೊರೇಶನ್‌ನ ಮೊದಲ ಮೇಯರ್ ಆಗಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ ನಂತರ ಅವರು ಮೋತಿಲಾಲ್ ನೆಹರೂ ಅವರೊಂದಿಗೆ ಸ್ವರಾಜ್ ಪಕ್ಷವನ್ನು ಸ್ಥಾಪಿಸಿದರು. ಚಿತ್ತರಂಜನ್ ದಾಸ್ ಅವರು ಜೂನ್ 16, 1925 ರಂದು ಅನಾರೋಗ್ಯದಿಂದ ನಿಧನರಾದರು.

# ಸ್ವಯಂಸೇವಕತ್ವದ ಮೂಲಕ ನಂಬಿಕೆಯನ್ನು ವೃದ್ಧಿಗೊಳಿಸಿದ ನಿದರ್ಶನಗಳು

ರಾಂಚಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳಲ್ಲಿ ಸಾವಯವ ಗೊಬ್ಬರದಿಂದ ಭೂಮಿಯನ್ನು ಸುಮಾರು 3 ವರ್ಷಗಳ ಸತತ ಪರಿಶ್ರಮದಿಂದ ಪೋಷಿಸಿ, ಬಹಳ ತಾಳ್ಮೆ ಮತ್ತು ಪ್ರೀತಿಯಿಂದ, ಸಾವಯವ ಧಾನ್ಯ, ಹಣ್ಣು ಮತ್ತು ತರಕಾರಿಗಳನ್ನು ಬೆಳೆದ ರೈತರಿಗೆ ಅವರ ಮೊದಲ ಫಸಲು ದೊರಕಿತ್ತು. ಅನಿರೀಕ್ಷಿತವಾಗಿ ಬಂದೆರಗಿದ ಕೊರೋನಾ ಲಾಕ್–ಡೌನ್ ಎಂಬ ವಿಪತ್ತು ಗ್ರಾಹಕರು ಮತ್ತು ರೈತರ ನಡುವೆ ಅಡ್ಡ ಗೋಡೆಯನ್ನು ಸೃಷ್ಟಿಸಿದಾಗ ಕೃಷಿಕರ ಸಹನೆಯ ಕಟ್ಟೆಯೊಡೆದಿತ್ತು.

ರೈತರಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡುವ ಮತ್ತು ಗ್ರಾಹಕರಿಗೆ ವಿಷಮುಕ್ತ ಆಹಾರದವನ್ನು ನೀಡುವ ಧ್ಯೇಯವನ್ನಿಟ್ಟುಕೊಂಡು ರಾಂಚಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರೇರಿತ "ಫ್ಯಾಮಿಲಿ ಫಾರ್ಮರ್ ಪ್ರಾಜೆಕ್ಟ್" ಜನ್ಮತಾಳಿತು. ರಾಷ್ಟ್ರೀಯ ಸೇವಾಭಾರತಿಯ ಸ್ವಯಂಸೇವಕರು ಸತತ ಮೂರು ತಿಂಗಳ ಕಾಲ ಪ್ರತಿ ಸಂಜೆ 4 ಗಂಟೆಯಿಂದ ಮರುದಿನ ಬೆಳಿಗ್ಗೆ 9 ರವರೆಗೆ ಈ ಗುಡ್ಡಗಾಡು ಬುಡಕಟ್ಟು ಪ್ರದೇಶಗಳ ರೈತರಿಂದ ಸೂಕ್ತ ಬೆಲೆಗೆ ತಾಜಾ ತರಕಾರಿಗಳನ್ನು ಖರೀದಿಸಿ ಬಡಾವಣೆಗಳ ಮನೆಮನೆಗೆ ತಲುಪಿಸುತ್ತಿದ್ದರು. 12 ಹಳ್ಳಿಗಳ ರೈತರು ಮತ್ತು ನಗರಗಳ 500 ಕುಟುಂಬಗಳು ಈ ಯೋಜನೆಯ ಫಲಾನುಭವಿಗಳು.

ತಮ್ಮ ಆನ್‌ಲೈನ್ ತರಗತಿಗಳನ್ನು ಪೂರೈಸಿದ ತರುವಾಯ ಪ್ರಿನ್ಸಿಪಾಲ್ ರಮಾದೀದೀ ಮತ್ತು ಸಹಾಯಕ ಶಿಕ್ಷಕರ ತಂಡವು ರಾಸಾಯನಿಕ ರಹಿತ ತರಕಾರಿಗಳನ್ನು ಸಫಲ ಉತ್ಪನ್ನಗಳನ್ನು ತಯಾರಿಸಿ,



ಗ್ರಾಹಕರ ಮೆಚ್ಚುಗೆ ಗಳಿಸಿದರು. ಇಂದು ರೈತರ ಉತ್ಪನ್ನಗಳು ಪಕ್ಕಾ ಬ್ರ್ಯಾಂಡ್‌ನೊಂದಿಗೆ ಮಾರುಕಟ್ಟೆಯಲ್ಲಿ ತಮ್ಮ ಛಾಪು ಮೂಡಿಸಲು ಸಿದ್ಧವಾಗಿದ್ದು, ಈ ಕೊರೋನಾ ಸಂಕಷ್ಟದ ಕಾಲದಲ್ಲೂ ಸುವರ್ಣ ಭವಿಷ್ಯದ ಆಶಾಕಿರಣ ಮೂಡಿಸುತ್ತಿದೆ.

ಕಾಲಚಕ್ರದ ಅಡಿಯಲ್ಲಿ ಮಗ್ಗದ ಸೀರೆಗಳು ನುಗ್ಗಾಗುತ್ತಿದ್ದವು. ಇಂಥ ಸಮಯದಲ್ಲಿ ಇವರ ಸಹಾಯಕ್ಕೆ ಧಾವಿಸಿದ್ದು ಸೇವಾಭಾರತಿಗೆ ಸಂಬಂಧಿಸಿದ ಜಾಗೃತಿ ಮಹಿಳಾ ಸ್ವಸಹಾಯ ಸಂಘದ ಸಹೋದರಿಯರು. ಲಾಕ್‌ಡೌನ್‌ನಿಂದ ಸಂತ್ರಸ್ತರಾದ ಸುಮಾರು 1000 ನೇಕಾರ ಕುಟುಂಬಗಳೊಡನೆ ಸಮಾಲೋಚನೆ ನಡೆಸಿ ಸಲಹೆ ನೀಡುವ ಮೂಲಕ ಅವರ ಸ್ಥೈರ್ಯ ಹೆಚ್ಚಿಸಿದ್ದಲ್ಲದೆ, ತಮ್ಮ ಕಾರ್ಯಕುಶಲತೆ ಮತ್ತು ಚಿಂತನೆಗಳಿಂದ ಲಾಕ್ಡೌನ್ ಸಮಯದಲ್ಲಿ ನೇಕಾರರ ಮತ್ತು ಮಾರುಕಟ್ಟೆಯ ನಡುವಿನ ಅಂತರವನ್ನು ಇಲ್ಲವಾಗಿಸಿದರು. ಸೀರೆ ವ್ಯಾಪಾರಕ್ಕಾಗಿ "ಆನ್‌ಲೈನ್ ಸೇವಾಕರ್ತ ವೆಬ್‌ಸೈಟ್" ನ್ನು ಪ್ರಾರಂಭಿಸಿ ಮನೆಗೂ ಮಾರುಕಟ್ಟೆಗೂ ಸಂಪರ್ಕ ಕಲ್ಪಿಸಿದರು. ಈ ಉದ್ಯಮದಲ್ಲಿ ಅರ್ಧದಷ್ಟು ಮಹಿಳಾ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಇದೇ ಅವರ ಜೀವನಾಧಾರವಾಗಿದೆ.

ಇಷ್ಟೇ ಅಲ್ಲದೇ, ಈ ಕೇಂದ್ರದ ಸೋದರಿಯರು ತಾವೇ ಖುದ್ದಾಗಿ 1 ಲಕ್ಷ ಮಾಸ್ಕ್ ಮತ್ತು 15 ಸಾವಿರ ರಾಖಿಗಳನ್ನೂ ತಯಾರಿಸಿದರು. ಮತ್ತೊಂದೆಡೆ, ಕೇರಳದ ಸೋದರಿಯರು ಕೊರೋನಾ ಕಾಲದಲ್ಲಿ ಹದಗೆಡುತ್ತಿರುವ ಮಾನಸಿಕ ಆರೋಗ್ಯದ ವಿರುದ್ಧ ಹೋರಾಡಲು ಟೊಂಕಕಟ್ಟಿ ನಿಂತರು. ಅದಕ್ಕಾಗಿ ಸೇವಾಭಾರತಿ ಪುಂಜರಾಣಿ ಆಪ್ತ ಸಲಹಾ ಕೇಂದ್ರದ ಅಡಿಯಲ್ಲಿ 14 ಮಹಿಳಾ ಮನೋವಿಜ್ಞಾನ ಸಲಹೆಗಾರರ ನೇತೃತ್ವದಲ್ಲಿ 14 ಸಲಹಾ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಅವರು ಮನೆಗಳಲ್ಲಿನ ಖಿನ್ನತೆ, ಒತ್ತಡ, ಕೌಟುಂಬಿಕ ಹಿಂಸೆ ಮತ್ತು ಮಾದಕ ವ್ಯಸನದಂತಹ ಮನೋರೋಗಗಳಿಂದ ಪಾರಾಗಲು ಆಬಾಲವೃದ್ಧರಿಗೆಲ್ಲ ಉಚಿತವಾಗಿ ಸೂಕ್ತ ಸಮಾಲೋಚನೆ ನಡೆಸಿ ತಿಳಿಹೇಳುವ ಮೂಲಕ ಉತ್ತಮ ಸಮಾಜದ ನಿರ್ಮಾಣಕ್ಕೆ ಉತ್ತೇಜನ ನೀಡುತ್ತಿದ್ದಾರೆ.

ಲಾಕ್ ಡೌನ್ ಸಮಯದಲ್ಲಿ, ಕಾನ್ಪುರದ ಕಿಶೋರಿ ಕೇಂದ್ರ ಹಾಗೂ ಮಾತೃಮಂಡಳಿಯ ತಂಡದೊಂದಿಗೆ ವ್ಯಾನಿನಲ್ಲಿ ಊಟದ ಪ್ಯಾಕೇಟುಗಳನ್ನು ತುಂಬಿಕೊಂಡು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಮತ್ತು ಸೇವಾಬಸ್ತಿಗಳಿಗೆ ದಿನನಿತ್ಯ 300 ಪ್ಯಾಕೇಟುಗಳಂತೆ 21 ದಿನಗಳ ಕಾಲ ಊಟ ಹಂಚಿದ ಅವರೆಲ್ಲರೂ ದೇವರಲ್ಲಿ ಮನಃಪೂರ್ವಕವಾಗಿ ಬೇಡಿದ್ದೊಂದೇ, ಇಂತಹ ಪರಿಸ್ಥಿತಿ ನಮ್ಮ ದೇಶಕ್ಕೆ ಇನ್ನೆಂದೂ ಕೊಡಬೇಡಪ್ಪ, ಎಂದು.

## ಪುಸ್ತಕ ಪರಿಚಯ

### ಭುಗಿಲು

**ಲೇಖಕರು: ಹೊ.ವೆ. ಶೇಷಾದ್ರಿ**
**ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ**
**ಬೆಲೆ: 750ರೂ. (ಜೂನ್ 21, 2025ರೊಳಗೆ ಪುಸ್ತಕವನ್ನು ಕಾಯ್ದಿರಿಸಿದರೆ ಬೆಲೆ: 600ರೂ)**

ಭಾರತದಲ್ಲಿ ಸ್ವಾತಂತ್ರ್ಯಸಿದ್ಧಿಯಾಗಿ ಪ್ರಜಾಪ್ರಭುತ್ವ ಜಾರಿಗೆ ಬಂದು ಇಪ್ಪತ್ತೇಳು ವರ್ಷಗಳಷ್ಟೆ ದಾಟಿದ್ದಾಗ (ಜೂನ್ 25, 1975) ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರವು ಸಂವಿಧಾನವನ್ನೇ ಧೂಳೀಪಟ ಮಾಡಿ ದೇಶಾದ್ಯಂತ 'ತುರ್ತುಪರಿಸ್ಥಿತಿ'ಯನ್ನು ಜಾರಿಗೊಳಿಸಿತು. ಪ್ರಜೆಗಳ ಎಲ್ಲ ಮೂಲಭೂತ ಹಕ್ಕುಗಳನ್ನು ಅಪಹರಣ ಮಾಡಿ ಕಾಂಗ್ರೆಸ್ಸೇತರ ರಾಷ್ಟ್ರನಾಯಕರನ್ನೂ ಪ್ರಜಾಪ್ರಭುತ್ವಪರ ಸಾಮಾಜಿಕ ಕಾರ್ಯಕರ್ತರನ್ನೂ ಜೈಲಿಗೆ ತಳ್ಳಿ ಅಪರಿಮಿತ ಹಿಂಸೆಯೊಡಗೂಡಿದ ಅಮಾನುಷ ಪೊಲೀಸ್ ರಾಜ್ಯವನ್ನು ಜಾರಿಗೊಳಿಸಿತು.




ತುರ್ತುಪರಿಸ್ಥಿತಿ ಎಂಬ ಇಪ್ಪತ್ತು ತಿಂಗಳ ಆ ಅತಿಘೋರ ದಮನಶಾಹಿಯಿಂದ ದೇಶವನ್ನು ಮುಕ್ತಗೊಳಿಸಲು ಸಾವಿರ ಸಾವಿರ ಮಂದಿ ತ್ಯಾಗಮಯ ದೇಶಪ್ರೇಮಿಗಳು ಬೆವರು–ರಕ್ತಗಳನ್ನು ನೀರಿನಂತೆ ಹರಿಸಬೇಕಾಯಿತು. ಎಷ್ಟೋ ಮಂದಿಯ ಬಲಿದಾನವೂ ಆಯಿತು.

ದೇಶದಾದ್ಯಂತ ನಡೆದ ಆ ಸ್ವಾತಂತ್ರ್ಯ ಸಂಘರ್ಷದ ಸಂಕ್ಷಿಪ್ತ ಚಿತ್ರಣದ ಜೊತೆಗೆ ಕರ್ನಾಟಕವು ಅದಕ್ಕೆ ಸಲ್ಲಿಸಿದ ವಿಶಿಷ್ಟ ಕಾಣಿಕೆಯ ವಿಸ್ತಾರವಾದ ವರ್ಣನೆ ಈ ಪುಸ್ತಕದಲ್ಲಿದೆ.

ಸಂಪರ್ಕ: 6360581957

# ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ, ಮದ್ಯಪಾನ ಮಾಡಬಾರದು

ನಾಗರಿಕ ಶಿಷ್ಟಾಚಾರ

ಸಕ್ರಿಯ ಧೂಮಪಾನದಿಂದ ರೋಗ ಮತ್ತು ಸಾವಿನ ಪ್ರಮಾಣ ಹೆಚ್ಚುತ್ತಿದೆ. ಆದರೆ, ಇದರ ಹೊರತಾಗಿ ಧೂಮಪಾನ ಮಾಡದ ಜನರು ನಿಷ್ಕ್ರಿಯ ರೀತಿಯಲ್ಲಿ ಧೂಮಪಾನದ ದುಷ್ಪರಿಣಾಮಗಳಿಂದ ಬಳಲುತ್ತಿದ್ದಾರೆ. ಸೆಕೆಂಡ್‌ಹ್ಯಾಂಡ್ ಸ್ಮೋಕ್ (SHS) ಅಥವಾ ಪರಿಸರ ತಂಬಾಕು ಹೊಗೆ (ETS) ಅನ್ನು ವ್ಯಕ್ತಿಗಳು ಉಸಿರಾಡುವುದರಿಂದ "ನಿಷ್ಕ್ರಿಯ ಧೂಮಪಾನ" ಉಂಟಾಗುತ್ತದೆ, ಇದು ಆರೋಗ್ಯಕ್ಕೆ ನೇರ ಧೂಮಪಾನದಷ್ಟೇ ಹಾನಿಕಾರಕವಾಗಿದೆ. ವಾಯು ಮಾಲಿನ್ಯದ ಹೆಚ್ಚಳವು ಜಾಗತಿಕ ಜಗತ್ತಿಗೆ ಪ್ರಮುಖ ಕಳವಳವಾಗಿದೆ. ಪ್ರಪಂಚವು ಧೂಮಪಾನ ಮತ್ತು ಮಾದಕ ದ್ರವ್ಯ ಸಂಬಂಧಿತ ಸಮಸ್ಯೆಗಳಂತಹ ಸಮಸ್ಯೆಗಳೊಂದಿಗೆ ಹೋರಾಡುತ್ತಿದೆ.




ಧೂಮಪಾನ ರಹಿತ ಕಾನೂನುಗಳನ್ನು ರೂಪಿಸುವ ಹಿಂದಿನ ಪ್ರಮುಖ ಪ್ರೇರಣೆಗಳಲ್ಲಿ ನಿಷ್ಕ್ರಿಯ ಧೂಮಪಾನವೂ ಒಂದು. ಸಕ್ರಿಯ ಧೂಮಪಾನಿಗಳನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳು ಏಕೆ ಯಾವುದೇ ಸಮಸ್ಯೆಯನ್ನು ಎದುರಿಸಬೇಕು? ನಿಷ್ಕ್ರಿಯ ಧೂಮಪಾನವು ಕ್ಯಾನ್ಸರ್, ಶಾಶ್ವತ ಅಂಗವೈಕಲ್ಯದಂತಹ ಅಪಾಯಕಾರಿ ಕಾಯಿಲೆಗಳನ್ನು ಉಂಟುಮಾಡುತ್ತದೆ ಮತ್ತು ಸಾವಿಗೆ ಕಾರಣವಾಗುತ್ತದೆ. ಆದ್ದರಿಂದ, ಧೂಮಪಾನ ಮಾಡುವ ಜನರು ಇತರ ಜನರ ಮೇಲೆ ಅದರ ಪರಿಣಾಮಗಳ ಬಗ್ಗೆ ಯೋಚಿಸಬೇಕು. ಭಾರತದ ಸಂವಿಧಾನವು ಜನರಿಗೆ ಆರು ಮೂಲಭೂತ ಮತ್ತು ಇತರ ವಿವಿಧ ಹಕ್ಕುಗಳನ್ನು ಒದಗಿಸಿದೆ. ಜನರು ತಮ್ಮ ಯಾವುದೇ ಹಕ್ಕುಗಳನ್ನು ಉಲ್ಲಂಘಿಸಿದರೆ ಯಾವಾಗಲೂ ಧ್ವನಿ ಎತ್ತಬೇಕಿದೆ.

ಹಾಗೆಯೇ ಸಾರ್ವಜನಿಕ ಸ್ಥಳಗಳಾದ ರಸ್ತೆಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಕ್ರೀಡಾಂಗಣಗಳು ಅಥವಾ ಚಲಿಸುವ ವಾಹನಗಳಂತಹ ಹೊರಾಂಗಣ ಸ್ಥಳಗಳಲ್ಲಿ ಮದ್ಯಪಾನ ಮಾಡಬಾರದು. ಇದರಿಂದ ಮದ್ಯಪಾನ ಮಾಡದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.


ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಗಿರಿಧರ್ ಉದ್ಯಾವರ, ಪಂಚಮಿ ಬಾಕಿಲಪದವು

# ಸಾಲುದ್ದದ ಸುದ್ದಿಗಳು

## 10 ವರ್ಷದ ಬಳಿಕ ಗೂಗಲ್ ಲೋಗೋಗೆ ಹೊಸ ಲುಕ್

ವಿಶ್ವದ ಪ್ರಮುಖ ತಂತ್ರಜ್ಞಾನ ಕಂಪನಿ ಗೂಗಲ್ ದಶಕದ ಬಳಿಕ ತನ್ನ ಲೋಗೋ 'ಜಿ'ಗೆ ಹೊಸ ರೂಪ ನೀಡಿದೆ. ಹೊಸ ಲೋಗೋದಲ್ಲಿ ಗೂಗಲ್ ತನ್ನ ಬ್ರ್ಯಾಂಡ್‌ನ ಗುರುತಾಗಿರುವ ನೀಲಿ, ಕೆಂಪು, ಹಸಿರು ಮತ್ತು ಹಳದಿ ಎಂಬ 4 ಬಣ್ಣಗಳನ್ನು ಹಾಗೆಯೇ ಉಳಿಸಿಕೊಂಡಿದೆ. ಆದರೆ ವಿನ್ಯಾಸದಲ್ಲಿ ಕೊಂಚ ವ್ಯತ್ಯಾಸ ಮಾಡಿದ್ದು, ಬಣ್ಣಗಳನ್ನು ಹೆಚ್ಚು ತೀಕ್ಷ್ಣ ಹಾಗೂ ಮೆರಗು ಬರುವಂತೆ ಮಾಡಿದೆ. ಮೊದಲು ಬಣ್ಣಗಳನ್ನು ಬ್ಲಾಕ್ ಶೈಲಿಯಲ್ಲಿ (ಚೌಕಾಕಾರ) ಕಾಣಲಾಗುತ್ತಿತ್ತು. ಈಗ ಅದೇ ಬಣ್ಣಗಳನ್ನು ಗ್ರೇಡಿಯಂಟ್‌ನಲ್ಲಿ ಅಂದರೆ ಗಾಢ ಛಾಯೆಯ ರೀತಿಯಲ್ಲಿ ಪರಿವರ್ತಿಸಲಾಗಿದೆ.

## ಯೋಜಿತ ಬಾಹ್ಯಾಕಾಶ ಕೇಂದ್ರಕ್ಕೆ ಭಾರತೀಯ ರಾಕೆಟ್ ಬಳಸಲು ಅಮೆರಿಕ ಸಂಸ್ಥೆ ಒಲವು



ಮುಂದಿನ ವರ್ಷ ವಿಶ್ವದ ಮೊದಲ ವಾಣಿಜ್ಯ ಬಾಹ್ಯಾಕಾಶ ನಿಲ್ದಾಣವನ್ನು ಪ್ರಾರಂಭಿಸಲು ಯೋಜಿಸುತ್ತಿರುವ ಅಮೆರಿಕ ಮೂಲದ ಕಂಪನಿ ವಾಸ್ಟ್, ತನ್ನ ಕಕ್ಷೀಯ ಪ್ರಯೋಗಾಲಯಕ್ಕೆ ಸಿಬ್ಬಂದಿಯನ್ನು ಸಾಗಿಸಲು ಭಾರತೀಯ ರಾಕೆಟ್‌ಗಳನ್ನು ಬಳಸುವ ಒಲವು ಹೊಂದಿದೆ. ವಾಸ್ಟ್ ಸಿಇಒ ಮ್ಯಾಕ್ಸ್ ಹೋಟ್ ಅವರು ಜಾಗತಿಕ ಬಾಹ್ಯಾಕಾಶ ಪರಿಶೋಧನ ಸಮ್ಮೇಳನದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ತಂಡವನ್ನು ಭೇಟಿಯಾಗಿದ್ದಾರೆ. ಮುಂದಿನ ವರ್ಷದ ಜುಲೈ ವೇಳೆಗೆ ಗಗನಯಾತ್ರಿಗಳನ್ನು ಕಕ್ಷೀಯ ಪ್ರಯೋಗಾಲಯಕ್ಕೆ ಹಾರಿಸುವ ಮೊದಲು ಬಾಹ್ಯಾಕಾಶ ನಿಲ್ದಾಣದಲ್ಲಿ ಸರಣಿ ಪರೀಕ್ಷೆಗಳನ್ನು ನಡೆಸಲು ವಾಸ್ಟ್ ಯೋಜಿಸಿದೆ. ಹೆಚ್ಚು ದೊಡ್ಡ ಬಾಹ್ಯಾಕಾಶ ಕೇಂದ್ರವಾದ ಹ್ಯಾವೆನ್–2 ರ ಮೊದಲ ಮಾಡ್ಯೂಲ್ 2028ರಲ್ಲಿ ಉಡಾವಣೆಯಾಗುವ ನಿರೀಕ್ಷೆಯಿದೆ.

## ಭಾರತದ ಸ್ವದೇಶಿ ನಿರ್ಮಿತ 'ಭಾರ್ಗವಾಸ್ತ್ರ'

'ಭಾರ್ಗವಾಸ್ತ್ರ' ಎಂಬ ಹೆಸರಿನ ಹಾರ್ಡ್ ಕಿಲ್ ಮೋಡ್‌ನಲ್ಲಿರುವ ಹೊಸ ಹಾಗೂ ಕಡಿಮೆ ವೆಚ್ಚದ ಕೌಂಟರ್–ಡ್ರೋನ್ ವ್ಯವಸ್ಥೆಯನ್ನು ಗೋಪಾಲ್‌ಪುರದ ಸೀವರ್ಡ್ ಫೈರಿಂಗ್ ರೇಂಜ್‌ನಲ್ಲಿ ಸೌರ ರಕ್ಷಣಾ ಮತ್ತು ಏರೋಸ್ಪೇಸ್ ಯಶಸ್ವಿಯಾಗಿ ಪರೀಕ್ಷಿಸಿದೆ. ಇದು ಡ್ರೋನ್



ಹಿಂಡುಗಳ ಹೆಚ್ಚುತ್ತಿರುವ ಬೆದರಿಕೆಯನ್ನು ಎದುರಿಸುವಲ್ಲಿ ಗಣನೀಯವಾಗಿ ಕಾರ್ಯನಿರ್ವಹಿಸುತ್ತದೆ. ಭಾರ್ಗವಾಸ್ತ್ರವು 2.5 ಕಿ.ಮೀ ದೂರದಲ್ಲಿ ಒಳಬರುವ ಡ್ರೋನ್‌ಗಳನ್ನು ಪತ್ತೆಹಚ್ಚುವ ಮತ್ತು ನಿರ್ಮೂಲನೆ ಮಾಡುವ ಸುಧಾರಿತ ಸಾಮರ್ಥ್ಯಗಳನ್ನು ಹೊಂದಿದೆ. ಇದು 20 ಮೀಟರ್‌ಗಳ ಮಾರಕ ತ್ರಿಜ್ಯವನ್ನು ಹೊಂದಿರುವ ಡ್ರೋನ್‌ಗಳ ಸಮೂಹವನ್ನು ತಟಸ್ಥಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ಸಮುದ್ರ ಮಟ್ಟದಿಂದ 5000 ಮೀ.ಗಿಂತ ಹೆಚ್ಚಿನ ಎತ್ತರದ ಪ್ರದೇಶಗಳು ಸೇರಿದಂತೆ ವೈವಿಧ್ಯಮಯ ಭೂಪ್ರದೇಶಗಳಲ್ಲಿ ಸರಾಗವಾಗಿ ನಿಯೋಜಿಸಲು ವಿನ್ಯಾಸಗೊಳಿಸಲಾದ ಈ ವ್ಯವಸ್ಥೆಯು ಭಾರತದ ಸಶಸ್ತ್ರ ಪಡೆಗಳ ವಿಶಿಷ್ಟ ಕಾರ್ಯಾಚರಣೆಯ ಬೇಡಿಕೆಗಳನ್ನು ಪೂರೈಸುತ್ತದೆ.

## ಮಾನವಸಹಿತ ಆಳ ಸಮುದ್ರಯಾನಕ್ಕೆ ಭಾರತ ರೆಡಿ

ಬ್ಲೂ ಎಕಾನಮಿಗೆ ಉತ್ತೇಜನ ನೀಡುವ ಸಲುವಾಗಿ ಭಾರತ ಸರಕಾರವು ಅಕ್ಟೋಬರ್ 2021ರಲ್ಲಿ ಮೆಗಾ ಓಷನ್ ಮಿಷನ್ 'ಸಮುದ್ರಯಾನ' ಆರಂಭಿಸಿ ಅಮೆರಿಕ, ರಷ್ಯಾ, ಜಪಾನ್, ಫ್ರಾನ್ಸ್ ಮತ್ತು ಚೀನಾದಂತಹ ರಾಷ್ಟ್ರಗಳ ಗಣ್ಯ ಕ್ಲಬ್‌ಗೆ ಸೇರ್ಪಡೆಗೊಂಡಿತು. ಸಮುದ್ರದಲ್ಲಿ ಪಾಲಿಮೆಟಾಲಿಕ್ ಮ್ಯಾಂಗನೀಸ್, ಗ್ಯಾಸ್ ಹೈಡ್ರೇಟ್‌ಗಳು, ಹೈಡ್ರೋ ಥರ್ಮಲ್ ಸಲ್ಫೈಡ್ ಮತ್ತು ಕೊಬಾಲ್ಟ್ ಕ್ರಸ್ಟ್‌ಗಳಂಥ ನಿರ್ಜೀವ ಸಂಪನ್ಮೂಲಗಳು 1,000ದಿಂದ 5500 ಮೀಟರ್‌ಗಳಷ್ಟು ಆಳದಲ್ಲಿ ಕಾಣಸಿಗುತ್ತವೆ. ಇವುಗಳ ಗಣಿಗಾರಿಕೆ ಸೇರಿದಂತೆ ಹಲವು ಉದ್ದೇಶಗಳಿಗಾಗಿ ಇದೀಗ ಮಾನವ ಸಹಿತ ಅನ್ವೇಷಣೆಗೆ ಭಾರತ ಮುಂದಾಗಿದೆ. ಭಾರತವು 2026ರಲ್ಲಿ ಸಮುದ್ರಯಾನ



ಯೋಜನೆಯನ್ನು ಆರಂಭಿಸಲಿದೆ. ಟೈಟೇನಿಯಂನಿಂದ ನಿರ್ಮಿಸಲಾಗಿರುವ ಮತ್ಸ್ಯ ಎನ್ನುವ ನೌಕೆ ಸಿದ್ಧವಾಗಿದ್ದು ಇದು ಸಮುದ್ರದಿಂದ 6 ಕಿಮೀವರೆಗಿನ ಆಳದವರೆಗೂ ಹೋಗಲಿದೆ. ಈ ನೌಕೆಯೊಳಗೆ ಮೂವರು ವಿಜ್ಞಾನಿಗಳೂ ಇರಲಿದ್ದಾರೆ. ಈ ರೀತಿ ಮಾನವಸಹಿತ ಆಳ ಸಮುದ್ರ ಅನ್ವೇಷಣೆ ನಡೆಸಿದ ಆರನೇ ದೇಶವಾಗಲಿದೆ ಭಾರತ.

## ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಿಂದ ಪದವಿ ಪಡೆದ 17 ಮಹಿಳಾ ಕೆಡೆಟ್‌ಗಳ ಮೊದಲ ಬ್ಯಾಚ್



ದೇಶದ ಮಿಲಿಟರಿ ಇತಿಹಾಸದಲ್ಲಿ ಒಂದು ಮಹತ್ವದ ಕ್ಷಣ ಜರುಗಿದೆ, ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ತನ್ನ 148ನೇ ಕೋರ್ಸ್‌ನ ಪಾಸಿಂಗ್ ಔಟ್ ಪೆರೇಡ್ ಅನ್ನು ಐತಿಹಾಸಿಕ ಖೇತರ್ಪಾಲ್ ಮೈದಾನದಲ್ಲಿ ನಡೆಸಿದ್ದು, ಇದರಲ್ಲಿ ಭಾರತೀಯ ಸಶಸ್ತ್ರ ಪಡೆಗಳಿಗೆ ಮೊದಲ ಮಹಿಳಾ ಕೆಡೆಟ್‌ಗಳ ಬ್ಯಾಚ್ ಅನ್ನು ನಿಯೋಜನೆ ಮಾಡಲಾಗಿದೆ. ಸಾಂಪ್ರದಾಯಿಕ ಮಿಲಿಟರಿ ವೈಭವಕ್ಕಾಗಿ ಮಾತ್ರವಲ್ಲದೆ, ಎನ್‌ಡಿಎ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಕೆಡೆಟ್ ತುಕಡಿಯ ಉಪಸ್ಥಿತಿಗಾಗಿ ಈ ಪೆರೇಡ್ ಐತಿಹಾಸಿಕವಾಗಿತ್ತು. ಮಿಜೋರಾಂ ರಾಜ್ಯಪಾಲ ಮತ್ತು ಮಾಜಿ ಸೇನಾ ಮುಖ್ಯಸ್ಥ ಜನರಲ್ ವಿ.ಕೆ. ಸಿಂಗ್ (ನಿವೃತ್ತ) ಮತ್ತು ಎನ್‌ಡಿಎ ಕಮಾಂಡೆಂಟ್ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಬರದ ನಾಡನ್ನು ಜಲಸಂರಕ್ಷಣೆಯಲ್ಲಿ ಮಾದರಿ ನಾಡನ್ನಾಗಿಸಿದ ದಂಪತಿ

ಪ್ರೇರಣಾ

ಬೇಸಗೆಗಾಲ ಬಂತೆಂದರೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಒಣ ಭೂಮಿ ಮತ್ತು ನೀರಿನ ಕೊರತೆಯು ಎಲ್ಲರನ್ನೂ ತಲೆಬಿಸಿ ಮಾಡಿಸುತ್ತಿತ್ತು. ಈ ಸಮಸ್ಯೆಯನ್ನು ದಶಕಗಳಿಂದ ಅನುಭವಿಸುತ್ತಾ ಬಂದ ಅಲ್ಲಿನ ಮಂದಿ ಈಗ ಹೊಸದಾದ ಯೋಜನೆಯನ್ನು ಕಂಡುಕೊಂಡಿದ್ದಾರೆ.

ಆಂಧ್ರಪ್ರದೇಶದಲ್ಲಿ ಕಲ್ಯಾಣದುರ್ಗ ಮತ್ತು ರಾಯದುರ್ಗದ ಗ್ರಾಮಸ್ಥರು ಪ್ರತಿ ವರ್ಷ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ತೀವ್ರವಾದ ನೀರಿನ ಸಮಸ್ಯೆಯನ್ನು ಅನುಭವಿಸುತ್ತಿದ್ದರು. ಇದಕ್ಕೆ ಪರಿಹಾರವಾಗಿ, 2024ರಲ್ಲಿ, ಕಸದ ತೊಟ್ಟಿಯಾಗಿದ್ದ ಪ್ರದೇಶಗಳನ್ನು ನೀರಿನ ಚಿಲುಮೆಯಾಗಿ ಪರಿವರ್ತಿಸಿದರು. ಎರಡೂ ಪಟ್ಟಣಗಳಲ್ಲಿ ಜಲಮೂಲಗಳು ಮತ್ತೆ ಕಾಣಿಸಿಕೊಂಡದ್ದು ಬರಗಾಲದ ನೆನಪುಗಳು ಮಸುಕಾಗಲು ಕಾರಣವಾಯಿತು.

> "ಸ್ಥಳೀಯ ಸಮುದಾಯದ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಂಡು ಸುಸ್ಥಿರ ನೀರಿನ ರಚನೆಗಳನ್ನು ನಿರ್ಮಿಸುವುದು ನಮ್ಮ ಗುರಿಯಾಗಿತ್ತು. ಸ್ಥಳೀಯ ಕಲ್ಲು ಕೆಲಸಗಾರರು ಅತ್ಯಗತ್ಯ ಪಾತ್ರ ವಹಿಸಿದ್ದರು. ಸಂರಕ್ಷಣಾ ಸಂದೇಶದ ಜಾಗೃತಿ ಮತ್ತು ಪ್ರಚಾರ ಚಟುವಟಿಕೆಗಳನ್ನು ಮಾಡಲಾಯಿತು. ಈ ಉಪಕ್ರಮ ಕೇವಲ ನೀರಿನ ಸಂರಕ್ಷಣೆಯನ್ನಷ್ಟೇ ಅಲ್ಲದೇ ನೀರೇ ಜೀವನ ಎನ್ನುವುದನ್ನು ಮನವರಿಕೆ ಮಾಡಿಕೊಟ್ಟಿದೆ. ಜಲಮೂಲಗಳನ್ನು ಪುನರುಜ್ಜೀವನಗೊಳಿಸುವುದರಿಂದ ಪರಿಸರ ವ್ಯವಸ್ಥೆಗಳನ್ನು ಪುನಃಸ್ಥಾಪಿಸಬಹುದು, ಜೀವನೋಪಾಯವನ್ನು ಸದೃಢಗೊಳಿಸಬಹುದು ಮತ್ತು ನಮ್ಮ ಭವಿಷ್ಯವನ್ನು ಸುರಕ್ಷಿತಗೊಳಿಸಬಹುದು ಎನ್ನುವುದನ್ನು ತಿಳಿಸಿದೆ.
>
> – ವಿನೀತ್ ಮತ್ತು ರೂಪಕ್





ಇದು ಐಎಫ್‌ಎಸ್ (ಇಂಡಿಯನ್ ಫಾರೆಸ್ಟ್ ಸರ್ವೀಸ್) ಅಧಿಕಾರಿ ವಿನೀತ್ ಕುಮಾರ್ ಪ್ರಾರಂಭಿಸಿದ ಯೋಜನೆಯ ಫಲಿತಾಂಶ. ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿರುವ ಅವರು, ಅವರ ಪತ್ನಿ ರೂಪಕ್ ಯಾದವ್ ಅವರೊಂದಿಗೆ 'ಅನಂತ ನೀರು ಸಂರಕ್ಷಣಂ' ಯೋಜನೆಯನ್ನು ಪ್ರಾರಂಭಿಸಿದರು. ಈ ಯೋಜನೆಯು ಸಮುದಾಯಕ್ಕೆ ಜೀವನಾಡಿಯಾಗಿ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ, ಹೊಸದಾದ ವ್ಯವಸ್ಥೆಗಳನ್ನು ರಚಿಸುವ ಯೋಜನೆ ಹೊಂದಿತು. ಸರ್ಕಾರದ ಯೋಜನೆಯ ಫಲವಾಗಿ ಮನೆ ಮನೆಗೆ ಪೈಪ್‌ಲೈನ್ ಅಳವಡಿಕೆಯಿಂದಾಗಿ, ಕುಡಿಯುವ ನೀರಿನ ಬಿಕ್ಕಟ್ಟು ಸ್ವಲ್ಪ ಮಟ್ಟಿಗೆ ಕಡಿಮೆ ಆಗಿದ್ದರೂ, ನೀರಿನ ಸಂರಕ್ಷಣೆಯು ಮಾನವ ಸಂಕುಲಕ್ಕೆ ಅತೀ ಅಗತ್ಯ ಎನ್ನುವುದನ್ನು ಇವರು ಸಾರಿದರು.

ಸಸ್ಯವರ್ಗದ ಕೊರತೆ ಮತ್ತು ಕಳಪೆ ಮಣ್ಣಿನ ಪರಿಸ್ಥಿತಿಯಿಂದ ಬಳಲುತ್ತಿರುವ ಎರಡೂ ಸ್ಥಳಗಳನ್ನು ರೂಪಾಂತರಗೊಳಿಸಿದರು.

ಜಲ ಸಂರಕ್ಷಣಾ ಕಾರ್ಯತಂತ್ರಗಳ ಕೊರತೆ ಮತ್ತು ಕಸ ಸುರಿಯುವಿಕೆ ಹಾಗೂ ಸಮಾಜವಿರೋಧಿ ಚಟುವಟಿಕೆಗಳಿಗೆ ಅರಣ್ಯ ಭೂಮಿಯನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಕಡಿಮೆ ಮಾಡಲು ಉಪಾಯಗಳನ್ನು ಹೂಡಿದರು.

ಪಾರಂಪರಿಕ ಜಲಮೂಲಗಳ ಪುನಶ್ಚೇತನದ ಕಾರ್ಯಕ್ಕೆ ಗ್ರಾಮಸ್ಥರೊಂದಿಗೆ ಈ ದಂಪತಿ ಮುಂದಾಗಿದ್ದಲ್ಲದೇ, ಹೊಸ ಜಲಮೂಲಗಳ ನಿರ್ಮಾಣ ಹಾಗೂ ಅವುಗಳ ಸುತ್ತಲೂ 7000 ಮರಗಳನ್ನು ನೆಟ್ಟರು. ಲಕ್ಷಾಂತರ ಲೀಟರ್ ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿರುವ ಕೊಳಗಳು ಮತ್ತು ಹಳೆಯ ಟ್ಯಾಂಕ್‌ಗಳು ಸೇರಿದಂತೆ 11 ಜಲಮೂಲಗಳನ್ನು ನಿರ್ಮಿಸಿ ಪುನರುಜ್ಜೀವನಗೊಳಿಸುವ ಮೂಲಕ, ವಿನೀತ್ ಅವರ ತಂಡವು ಮಳೆ ನೀರನ್ನು ವಿಭಿನ್ನ ರೀತಿಯಲ್ಲಿ ಬಳಸಿಕೊಂಡಿತು. ಹೂಳು ತುಂಬಿದ ಟ್ಯಾಂಕ್‌ಗಳನ್ನು ತೆರವುಗೊಳಿಸುವುದರ ಜೊತೆಗೆ, ನೀರು ಹಿಡಿದಿಟ್ಟುಕೊಳ್ಳುವ ವ್ಯವಸ್ಥೆಯನ್ನು ಹೆಚ್ಚಿಸಲು ಸ್ಥಳೀಯ ಕಲ್ಲಿನ ವಸ್ತುಗಳನ್ನು ಬಳಸಲಾಯಿತು. ಸ್ಥಳೀಯ ಕೊಳಗಳ ಒಡ್ಡುಗಳು ಮತ್ತು ಕಟ್ಟುಗಳು ಹೊಸದಾಗಿ ರಚನೆಗೊಂಡವು.


ಈ ದಂಪತಿಗಳು ಹಳ್ಳಿಗರನ್ನು ತಮ್ಮ ಜೊತೆ ಸೇರಿಸಿಕೊಂಡು, ಕೆಲಸವನ್ನು ನಿರ್ವಹಿಸಿದರು. ಸುಮಾರು 400 ಗ್ರಾಮಸ್ಥರು ಈ ಯೋಜನೆಯಲ್ಲಿ ಭಾಗವಹಿಸಿ, ಜಲಮೂಲಗಳ ಸೃಷ್ಟಿ ಮತ್ತು ನಿರ್ವಹಣೆಗೆ ಸಕ್ರಿಯವಾಗಿ ಕೊಡುಗೆ ನೀಡಿದರು. ಇದರ ಫಲವಾಗಿ ಇಂದು ಈ ಗ್ರಾಮ ಬರದ ಪರಿಸ್ಥಿತಿಯನ್ನು ಎದುರಿಸುವುದಿಲ್ಲ. ಊರಿನವರ ಹಾಗೂ ದಂಪತಿಗಳ ಯೋಜನೆಯು ಹಲವಾರು ಗ್ರಾಮಗಳಿಗೆ ಮಾದರಿಯಾಗಿದೆ.

ಪುಂಗವ PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JUNE 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-06-2025



## ರಷ್ಯಾದಲ್ಲಿ ಭಾರತದ ಕಾವೇರಿ ಜೆಟ್ ಎಂಜಿನ್‌ನ ಪ್ರಯೋಗ



ಭಾರತವು ರಷ್ಯಾದಲ್ಲಿ ಸ್ಥಳೀಯ ಕಾವೇರಿ ಜೆಟ್ ಎಂಜಿನ್‌ನ ಪ್ರಯೋಗಗಳನ್ನು ನಡೆಸುತ್ತಿದೆ. ದೀರ್ಘ-ಶ್ರೇಣಿಯ ಮಾನವರಹಿತ ಯುದ್ಧ ವೈಮಾನಿಕ ವಾಹನ (UCAV)ಗೆ ಶಕ್ತಿ ತುಂಬಲು ಬಳಸಬಹುದಾದ ಎಂಜಿನ್ ಇದಾಗಿದ್ದು, ಇದರ ಪ್ರಯೋಗಗಳನ್ನು ಡಿಆರ್‌ಡಿಓ ನಡೆಸುತ್ತಿದೆ. ಆರಂಭದಲ್ಲಿ ತೇಜಸ್ ಯುದ್ಧ ವಿಮಾನಕ್ಕಾಗಿ ಯೋಜಿಸಲಾಗಿದ್ದ ಕಾವೇರಿ ಎಂಜಿನ್ ಈಗ ಭಾರತದಲ್ಲಿ ತಯಾರಿಸಿದ UCAVಗಳಿಗೆ ಶಕ್ತಿ ತುಂಬಲಿದೆ. ಆಪರೇಷನ್ ಸಿಂಧೂರ್ ನಂತರ ಸ್ವದೇಶಿ ಎಂಜಿನ್‌ಗಳ ಬಗ್ಗೆ ಸಾರ್ವಜನಿಕರಲ್ಲಿ ಹೊಸ ಆಸಕ್ತಿ ಮೂಡಿದೆ. ಕಾವೇರಿ ಎಂಜಿನ್ ಕಡಿಮೆ-ಬೈಪಾಸ್, ಟ್ವಿನ್-ಸ್ಪೂಲ್ ಟರ್ಬೋಫ್ಯಾನ್ ಎಂಜಿನ್ ಆಗಿದೆ. DRDO ಅಡಿಯಲ್ಲಿ ಗ್ಯಾಸ್ ಟರ್ಬೈನ್ ಸಂಶೋಧನಾ ಸ್ಥಾಪನೆ (GTRE) ಅಭಿವೃದ್ಧಿಪಡಿಸಿದ ಈ ಎಂಜಿನ್ 80 ಕಿಲೋನ್ಯೂಟನ್ (kN) ಒತ್ತಡವನ್ನು ಹೊಂದಿದೆ. ಕಾವೇರಿ ಯೋಜನೆಯನ್ನು 1980ರ ದಶಕದಲ್ಲಿ ದೇಶೀಯ ಯುದ್ಧ ವಿಮಾನ ತೇಜಸ್‌ಗೆ ಶಕ್ತಿ ತುಂಬುವ ಸಲುವಾಗಿ ಪ್ರಾರಂಭಿಸಲಾಯಿತು. ಭಾರತದ ಲಘು ಯುದ್ಧ ವಿಮಾನ (LCA) ತೇಜಸ್‌ಗಾಗಿ ಕಾವೇರಿ ಎಂಜಿನ್ ಅನ್ನು ವಿವಿಧ ಸವಾಲುಗಳಿಂದಾಗಿ ಇದುವರೆಗೆ ಬಳಸಲಾಗಲಿಲ್ಲ, ಅದರಲ್ಲೂ 1998ರ ಪರಮಾಣು ಪರೀಕ್ಷೆಗಳ ನಂತರ ಭಾರತದ ಮೇಲಿನ ಅಂತರರಾಷ್ಟ್ರೀಯ ನಿರ್ಬಂಧಗಳಿಂದಾಗಿ ಈ ಯೋಜನೆಯು ವಿಳಂಬಗೊಂಡಿತ್ತು. ಕಾವೇರಿ ತೇಜಸ್ Mk1ಗೆ ಶಕ್ತಿ ತುಂಬಲು ವಿಫಲವಾದ ನಂತರ, ಭಾರತವು ಯುದ್ಧ ವಿಮಾನಕ್ಕಾಗಿ ಅಮೇರಿಕನ್ ನಿರ್ಮಿತ GE F404 ಎಂಜಿನ್ ಅನ್ನು ಆಶ್ರಯಿಸಬೇಕಾಯಿತು. ಸದ್ಯಕ್ಕೆ ಕಾವೇರಿಯ ಪ್ರಯೋಗ ರಷ್ಯಾದಲ್ಲಿ ನಡೆಯುತ್ತಿದ್ದು, ಶೀಘ್ರದಲ್ಲೇ ಅದು ಕಾರ್ಯಾರಂಭಿಸುವ ನಿರೀಕ್ಷೆ ಇದೆ.

## ಮಹಾರಾಷ್ಟ್ರದಲ್ಲಿ 1ನೇ ತರಗತಿಯಿಂದ ಮಕ್ಕಳಿಗೆ ಮಿಲಿಟರಿ ತರಬೇತಿ

ದೇಶಭಕ್ತಿ, ಶಿಸ್ತು ಮತ್ತು ನಿಯಮಿತ ದೈಹಿಕ ವ್ಯಾಯಾಮದ ಅಭ್ಯಾಸವನ್ನು ಉತ್ತೇಜಿಸಲು ಮಹಾರಾಷ್ಟ್ರದಲ್ಲಿ 1 ನೇ ತರಗತಿಯಿಂದ ವಿದ್ಯಾರ್ಥಿಗಳಿಗೆ ಮೂಲಭೂತ ಮಿಲಿಟರಿ ತರಬೇತಿಯನ್ನು ನೀಡಲಾಗುವುದು ಎಂದು ರಾಜ್ಯ ಶಾಲಾ ಶಿಕ್ಷಣ ಸಚಿವ ದಾದಾ ಭೂಸೆ ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ನಿವೃತ್ತ ಸೈನಿಕರನ್ನು ನೇಮಿಸಿಕೊಳ್ಳಲಾಗುವುದು ಎಂದಿದ್ದಾರೆ. "1 ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂಲಭೂತ ಮಟ್ಟದ ಮಿಲಿಟರಿ ತರಬೇತಿಯನ್ನು ನೀಡಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದು ದೇಶ ಪ್ರೇಮವನ್ನು ಬೆಳೆಸಲು, ನಿಯಮಿತವಾಗಿ ದೈಹಿಕ ವ್ಯಾಯಾಮ ಮಾಡುವಂತಹ ಅಭ್ಯಾಸಗಳನ್ನು ಪ್ರೋತ್ಸಾಹಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾದ ಶಿಸ್ತನ್ನು ಪ್ರೋತ್ಸಾಹಿಸಲು ಸಹಾಯ ಮಾಡುತ್ತದೆ" ಎಂದಿದ್ದಾರೆ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಪ್ರಸ್ತಾವನೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ ಎಂದ ಅವರು, ಈ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು, ಕ್ರೀಡಾ ಶಿಕ್ಷಕರು, ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ), ಸ್ಕೌಟ್ಸ್ ಮತ್ತು ಗೈಡ್ಸ್ ಜೊತೆಗೆ 2.5 ಲಕ್ಷ ಮಾಜಿ ಸೈನಿಕರ ಸಹಾಯವನ್ನು ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

## ಪ್ರವಾಹದಿಂದಾಗಿ ಸಂಕಷ್ಟದಲ್ಲಿ ಸಿಕ್ಕಿಂ: ವಾಯುಪಡೆಯಿಂದ ರಕ್ಷಣಾ ಕಾರ್ಯ

ಭಾರೀ ಮಳೆಯಿಂದಾಗಿ ಉಂಟಾದ ಭೂಕುಸಿತ ಮತ್ತು ಪ್ರವಾಹದಿಂದಾಗಿ ಸಿಕ್ಕಿಂ ಸಂಕಷ್ಟಕ್ಕೆ ಸಿಲುಕಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ವಾಯುಪಡೆಯು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದೆ. ಉತ್ತರ ಸಿಕ್ಕಿಂನ ಚಾಟೆನ್‌ನಿಂದ ಸಿಲುಕಿಕೊಂಡಿದ್ದ ನಾಗರಿಕರ ಮೊದಲ ಬ್ಯಾಚ್ ಅನ್ನು ಐಎಎಫ್ ರಕ್ಷಿಸಿದೆ. ಮಂಗನ್ ಜಿಲ್ಲೆಯಲ್ಲಿ ಸಿಲುಕಿಕೊಂಡಿದ್ದ ಪ್ರವಾಸಿಗರು ಮತ್ತು ಗಾಯಗೊಂಡ ಸೇನಾ ಸಿಬ್ಬಂದಿಯನ್ನು ಸ್ಥಳಾಂತರಿಸಲು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ. ಎನ್‌ಡಿಆರ್‌ಎಫ್, ಐಎಎಫ್‌ನೊಂದಿಗೆ ಸಮನ್ವಯದೊಂದಿಗೆ, ಎರಡು ಮಿ -17 ವಿ 5 ಹೆಲಿಕಾಪ್ಟರ್‌ಗಳನ್ನು ಬಳಸಿಕೊಂಡು ಗಾಯಗೊಂಡ ಸೈನಿಕರು, ಅವರ ಕುಟುಂಬಗಳು ಮತ್ತು ಪ್ರವಾಸಿಗರನ್ನು ರಕ್ಷಿಸಿದೆ. ಈ ಪ್ರದೇಶದಲ್ಲಿ ಹಲವಾರು ಭೂಕುಸಿತಗಳಿಂದಾಗಿ ಸುಮಾರು 150 ಪ್ರವಾಸಿಗರು ಲಾಚೆನ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಈ ನಡುವೆ ಚಾಟೆನ್‌ನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಮೂವರು ಸೇನಾ ಸಿಬ್ಬಂದಿ ಪ್ರಾಣ ಕಳೆದುಕೊಂಡರು ಮತ್ತು ಇತರ ನಾಲ್ವರು ಗಾಯಗೊಂಡರು.



ಮಂಗನ್‌ನಲ್ಲಿನ ಪರಿಸ್ಥಿತಿಯನ್ನು ನಿರ್ಣಯಿಸಲು ಸಿಕ್ಕಿಂ ಮುಖ್ಯ ಕಾರ್ಯದರ್ಶಿ ಆರ್. ತೆಲಾಂಗ್ ಗ್ಯಾಂಗ್‌ಟಾಕ್‌ನಲ್ಲಿ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು ಮತ್ತು ಪರಿಹಾರ ಕಾರ್ಯಗಳಿಗೆ ಸಂಪೂರ್ಣ ಬೆಂಬಲ ನೀಡುವಂತೆ ಎಲ್ಲಾ ಸಂಸ್ಥೆಗಳಿಗೆ ನಿರ್ದೇಶನ ನೀಡಿದರು. ಲಾಚುಂಗ್‌ನಲ್ಲಿ ಸಿಲುಕಿದ್ದ ಎಲ್ಲಾ ಪ್ರವಾಸಿಗರನ್ನು ಜಿಲ್ಲಾಡಳಿತ ಯಶಸ್ವಿಯಾಗಿ ಸ್ಥಳಾಂತರಿಸಿತು. ನಿರಂತರ ಮಳೆ ಮತ್ತು ಭೂಕುಸಿತಗಳು ಮಂಗನ್ ಜಿಲ್ಲೆಯಲ್ಲಿ ರಸ್ತೆ ಸಂಪರ್ಕವನ್ನು ತೀವ್ರವಾಗಿ ಅಡ್ಡಿಪಡಿಸಿವೆ.

## ಈದ್ ಅಲ್-ಅಧಾ ವೇಳೆ ಪ್ರಾಣಿ ಬಲಿ ನಿಷೇಧಿಸಿದ ಮುಸ್ಲಿಂ ರಾಷ್ಟ್ರ ಮೊರಾಕೊ

ಈದ್ ಅಲ್-ಅಧಾ ಸಂದರ್ಭದಲ್ಲಿ ನೀಡಲಾಗುವ ಪ್ರಾಣಿ ಬಲಿಯನ್ನು ಸ್ವತಃ ಮುಸ್ಲಿಂ ದೇಶವೊಂದು ನಿಷೇಧಿಸುವ ಮೂಲಕ ಭಾರೀ ಸುದ್ದಿ ಮಾಡಿದೆ. ಮೊರಾಕೊದ ದೊರೆ ಮೊಹಮ್ಮದ್ VI, ಆರ್ಥಿಕ ಒತ್ತಡಗಳು ಮತ್ತು ಜಾನುವಾರುಗಳ ಆರೋಗ್ಯದ ಮೇಲಿನ ಕಳವಳಗಳನು ಉಲ್ಲೇಖಿಸಿ ಈ ವರ್ಷದ ಈದ್ ಅಲ್-




ಅಧಾ ಸಮಯದಲ್ಲಿ ಮೇಕೆಗಳನ್ನು ಬಲಿ ನೀಡುವುದನ್ನು ನಿಷೇಧಿಸಿ ನಿರ್ದೇಶನವನ್ನು ಹೊರಡಿಸಿದ್ದಾರೆ. ಆರು ವರ್ಷಗಳ ತೀವ್ರ ಬರ ಮತ್ತು ಜಾನುವಾರು ವೆಚ್ಚಗಳು ಗಗನಕ್ಕೇರುತ್ತಿರುವ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ಅಲ್ಲದೇ ಮೊರೊಕ್ಕನ್ನರು ಪ್ರಾರ್ಥನೆ ಮತ್ತು ದಾನದ ಮೂಲಕ ಮಾತ್ರ ಈದ್ ಆಚರಿಸುವಂತೆ ಒತ್ತಾಯಿಸಿದ್ದಾರೆ. ರಾಷ್ಟ್ರದ ಪರವಾಗಿ ನಾನೇ ಪ್ರಾಣಿ ಬಲಿ ಅರ್ಪಿಸುವುದಾಗಿ ಅವರು ಘೋಷಿಸಿದ್ದಾರೆ. ಆದರೆ ಅವರ ನಡೆ ಜನರ ಅಸಮಾಧಾನಕ್ಕೆ ಕಾರಣವಾಗಿದ್ದು ಆಳವಾದ ಆಧ್ಯಾತ್ಮಿಕ ಮಹತ್ವವನ್ನು ಹೊಂದಿರುವ ಶತಮಾನಗಳಷ್ಟು ಹಳೆಯ ಆಚರಣೆಯನ್ನು ನಿರ್ಬಂಧಿಸಿರುವುದು ಸರಿಯಲ್ಲ ಎಂಬ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

## ಜನಸಂಖ್ಯಾ ಗಣತಿ-2027 ಅನ್ನು ಜಾತಿ ಗಣತಿಯೊಂದಿಗೆ ಎರಡು ಹಂತಗಳಲ್ಲಿ ನಡೆಸಲು ಕೇಂದ್ರ ನಿರ್ಧಾರ

ಜನಸಂಖ್ಯಾ ಗಣತಿ-2027 ಅನ್ನು ಜಾತಿಗಳ ಗಣತಿಯೊಂದಿಗೆ ಎರಡು ಹಂತಗಳಲ್ಲಿ ನಡೆಸಲಾಗುವುದು ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ (MHA) ಘೋಷಿಸಿದೆ. ದೇಶದ ಬಹುತೇಕ ಭಾಗಗಳಲ್ಲಿ ಮಾರ್ಚ್, 2027ರ ಮೊದಲ ದಿನದಿಂದಲೇ ಗಣತಿ ಆರಂಭವಾಗುವ ನಿರೀಕ್ಷೆ ಇದೆ. ಆದರೆ, ಲಡಾಖ್ ಕೇಂದ್ರಾಡಳಿತ ಪ್ರದೇಶ ಮತ್ತು ಜಮ್ಮು-ಕಾಶ್ಮೀರದ ಕೇಂದ್ರಾಡಳಿತ ಪ್ರದೇಶ ಮತ್ತು ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಹಿಮಪಾತ ಪ್ರದೇಶಗಳಲ್ಲಿ ಅಕ್ಟೋಬರ್, 2026ರ ಮೊದಲ ದಿನದ ಗಣತಿ ಆರಂಭವಾಗುವ ನಿರೀಕ್ಷೆ ಇದೆ. "ಈ ದಿನಾಂಕಗಳೊಂದಿಗೆ ಜನಸಂಖ್ಯಾ ಗಣತಿ ನಡೆಸುವ ಉದ್ದೇಶಕ್ಕಾಗಿ ಅಧಿಸೂಚನೆಯನ್ನು 1948ರ ಜನಗಣತಿ ಕಾಯ್ದೆಯ ಸೆಕ್ಷನ್ 3ರ ನಿಬಂಧನೆಯ ಪ್ರಕಾರ 16.06.2025 ರಂದು ತಾತ್ಕಾಲಿಕವಾಗಿ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲಾಗುವುದು" ಎಂದು ಸಚಿವಾಲಯ ತಿಳಿಸಿದೆ. ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ 2021ರ ಜನಗಣತಿಯನ್ನು ಸ್ಥಗಿತಗೊಳಿಸಿರುವುದು ಸೇರಿದಂತೆ ಹಲವಾರು ವಿಳಂಬಗಳ ನಂತರ ಸರ್ಕಾರ ಈ ಮಹತ್ವಪೂರ್ಣ ನಿರ್ಧಾರವನ್ನು ತೆಗೆದುಕೊಂಡಿದೆ. "ಭಾರತದ ಜನಗಣತಿಯನ್ನು 1948ರ ಜನಗಣತಿ ಕಾಯ್ದೆ ಮತ್ತು 1990ರ ಜನಗಣತಿ ನಿಯಮಗಳ ನಿಬಂಧನೆಗಳ ಅಡಿಯಲ್ಲಿ ನಡೆಸಲಾಗುತ್ತದೆ. ಭಾರತದ ಕೊನೆಯ ಜನಗಣತಿಯನ್ನು 2011ರಲ್ಲಿ ಎರಡು ಹಂತಗಳಲ್ಲಿ ನಡೆಸಲಾಗಿದೆ" ಎಂದು ಸಚಿವಾಲಯ ತಿಳಿಸಿದೆ.

## ಅಯೋಧ್ಯೆಯಲ್ಲಿ ರಾಮ ದರ್ಬಾರ್ ಲೋಕಾರ್ಪಣೆ



ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮನ ನಂತರ, ಇದೀಗ ರಾಜಾರಾಮನ ಸಹಿತ ರಾಮ ದರ್ಬಾರ್ ನ ಪ್ರಾಣಪ್ರತಿಷ್ಠೆ ಪೂರ್ಣಗೊಂಡಿದೆ. ತ್ರೇತಾಯುಗದಲ್ಲಿ ಮಹರ್ಷಿ ವಸಿಷ್ಠರು ಪ್ರಾರಂಭಿಸಿದ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ರಾಮನ ಪ್ರಾಣಪ್ರತಿಷ್ಠೆಯ ಸಮಾರಂಭ ಅದ್ದೂರಿಯಾಗಿ ಮಾಡಲಾಯಿತು. ಗಂಗಾವತರಣ ದಿನ ಅಭಿಜಿತ್ ಮುಹೂರ್ತದಲ್ಲಿ ಜನ್ಮಭೂಮಿ ಸಂಕೀರ್ಣದ ರಾಮ ಮಂದಿರದಲ್ಲಿ ಸಿಎಂ ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ರಾಮ ದರ್ಬಾರ್‌ನ ಪ್ರಾಣಪ್ರತಿಷ್ಠೆ ಸಂಪನ್ನವಾಯಿತು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.